# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 617

ಸದಸ್ಯರ ಹೆಸರು : ಶ್ರೀ ಗೋವಿಂದರಾಜು

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 17.12.2021.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಬೆಳೆಯುವ ಟೋಮೆಟೋ ಬೆಳೆಗೆ ಅಂಗಮಾರಿ ರೋಗ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ ಈ ರೋಗವನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; | **ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ/ರೋಗಗಳನ್ನು ತಡೆಗಟ್ಟಲು ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**<br>• ತೋಟಗಾರಿಕೆ ಬೆಳೆಗಳಿಗೆ ಬೀಳುವ ಕೀಟ / ರೋಗಗಳ ನಿಯಂತ್ರಣೆ ಮಾಡಲು ಅಗತ್ಯವಿರುವ ತಾಂತ್ರಿಕ ಮಾಹಿತಿಯನ್ನು ರೈತರಿಗೆ ಸಭೆಗಳು, ತರಬೇತಿಗಳು ಹಾಗೂ ಕರಪತ್ರಗಳ ಮೂಲಕ ನೀಡಲಾಗುತ್ತಿದೆ.<br>• ಕೀಟ & ರೋಗಗಳ ಸಮಗ್ರ ನಿಯಂತ್ರಣೆಗಾಗಿ ಸಸ್ಯ ಸಂರಕ್ಷಣಾ ಔಷಧಿ ಖರೀದಿಗೆ ಸಾಮಾನ್ಯ ವರ್ಗದವರಿಗೆ ಶೇ.75ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಶೇ.90 ರಷ್ಟು ಸಹಾಯ ಧನವನ್ನು ನೀಡಲಾಗುತ್ತಿದೆ.<br>• ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಲ್ಲಿ ಸಮಗ್ರ ಕೀಟ & ರೋಗಗಳ ನಿಯಂತ್ರಣಕ್ಕೆ ಶೇ.30ರಷ್ಟು ಸಹಾಯಧನವನ್ನುನೀಡಲಾಗುತ್ತಿದೆ. |
| ಇ) | ಸಪ್ಟೆಂಬರ್ ನಿಂದಬೀಳುತ್ತಿರುವ ಮಳೆಯಿಂದ ತೋಟಗಾರಿಕೆ ಬೆಳೆಯಾದ ಟೋಮೇಟೋ, ಕೊತ್ತಂಬರಿ ಸೊಪ್ಪು, ಬೀನ್ಸ್, ಕ್ಯಾರೆಟ್, ಹೂಕೋಸು ಮುಂತಾದ ಬೆಳೆಗೂ ಹಾನಿ ಆಗಿರುವುದು ಸರ್ಕಾರ ಗಮನಿಸಿದೆಯೇ; | ಹೌದು. |

| | | |
|---|---|---|
| ಈ) | ಗಮನಿಸಿದ್ದಲ್ಲಿ, ಸರ್ಕಾರದಿಂದ ರೈತರಿಗೆ ಇದುವರೆಗೂ ಎಷ್ಟು ಪರಿಹಾರ ನೀಡಲಾಗಿದೆ? | ರಾಷ್ಟ್ರೀಯ/ ರಾಜ್ಯ ವಿಪತ್ತು ಪರಿಹಾರ ನಿಧಿ (NDRF/SDRF) ಮಾರ್ಗಸೂಚಿಯನ್ವಯ ಪ್ರತಿ ಹೇಕ್ಟರ್ ಮಳೆಯಾಶ್ರಿತ ಬೆಳೆಗಳಿಗೆ ರೂ.6800 ಪ್ರತಿ ಹೆಕ್ಟೇರ್‌ಗೆ ಹಾಗೂ ನೀರಾವರಿ ಬೆಳೆಗಳಿಗೆ ರೂ.13500 ಪ್ರತಿ ಹೆಕ್ಟೇರ್‌ಗೆ ಮತ್ತು ಬಹು ವಾರ್ಷಿಕ ಬೆಳೆಗಳಿಗೆ ರೂ.18000 ಪ್ರತಿ ಹೆಕ್ಟೇರ್‌ರಂತೆ ಪ್ರತಿ ಫಲಾನುಭವಿಗೆ ಗರಿಷ್ಠ 2.00 ಹೆಕ್ಟರ್‌ವರೆಗೆ ಕಂದಾಯ ಇಲಾಖೆಯ ಮುಖಾಂತರ ಪರಿಹಾರ ಧನ ವಿತರಿಸಲಾಗುತ್ತಿದೆ.<br>ಇದುವರೆಗೂ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ನಷ್ಟ ಪರಿಹಾರವಾಗಿ ರಾಜ್ಯದಲ್ಲಿ ಒಟ್ಟಾರೆ 444112 ಫಲಾನುಭವಿಗಳಿಗೆ ರೂ.413.09ಕೋಟಿ ಪರಿಹಾರ ಧನವನ್ನು ಕಂದಾಯ ಇಲಾಖೆಯಿಂದ ಪಾವತಿಸಲಾಗಿರುತ್ತದೆ. |

HORTI 536 HGM 2021

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.